**ಅತಿ ಜರೂರು**

ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ
ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/

ಆಯುಕ್ತರವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 03.01.2023

**ಸುತ್ತೋಲೆ**

ವಿಷಯ: ZERO BALANCE SUBSIDIARY ACCOUNT–CURRENT ACCOUNT ಬ್ಯಾಂಕ್ ಖಾತೆಯನ್ನು ಸೃಜಿಸುವ ಕುರಿತು.

ಉಲ್ಲೇಖ: ರಾಜ್ಯ ಸಂಪರ್ಕಾಧಿಕಾರಿಯವರ ಪತ್ರ ಸಂಖ್ಯೆ:ಯುಸೇಇ/ರಾಸೇಯೋ/121/2022-23/547 ದಿನಾಂಕ: 03.01.2023

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಿತ ಪತ್ರದನ್ವಯ ಇಲಾಖೆಯ ರಾಷ್ಟ್ರೀಯ ಸೇವಾ ಯೋಜನಾ ಕೋಶದಿಂದ ಅನುದಾನ ಬಿಡುಗಡೆಗೊಳಿಸಲು ಸಂಸ್ಥೆಗಳು ZBSA (ZERO BALANCE SUBSIDIARY ACCOUNT –CURRENT ACCOUNT ) ಖಾತೆಯನ್ನು ಹತ್ತಿರದ SBI ಬ್ಯಾಂಕಿನಲ್ಲಿ ತೆರೆಯುವುದನ್ನು ಕೇಂದ್ರ ಸರ್ಕಾರ ಕಡ್ಡಾಯಗೊಳಿಸಿದೆ.

ಈ ಹಿಂದೆ ಯಾವುದೇ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ, ಸಂಸ್ಥೆಗಳಿಂದ ತೆರೆಯಲಾದ ರಾ.ಸೇ.ಯೋ ಉಳಿತಾಯ ಖಾತೆಗಳಿಗೆ ಅನುದಾನವನ್ನು PFMS ಮುಖೇನ ಇಲಾಖೆಯಿಂದ ಬಿಡುಗಡೆಗೊಳಿಸಲಾಗುತ್ತಿತ್ತು. ಇನ್ನುಂದೆ ರಾಸೇಯೋ ಅನುದಾನವನ್ನು ಕಡ್ಡಾಯವಾಗಿ ZBSA (ZERO BALANCE SUBSIDIARY ACCOUNT–CURRENT ACCOUNT) ಮೂಲಕವೇ ಬಿಡುಗಡೆಗೊಳಿಸಲು ನಿರ್ದೇಶನವಿರುವುದರಿಂದ ರಾ.ಸೇಯೋ ಅನುದಾನವನ್ನು ಪಡೆಯುತ್ತಿರುವ ಘಟಕಗಳು "Principal and NSS officer" ಎಂಬ ಹೆಸರಿನ ZERO BALANCE SUBSIDIARY ACCOUNT–CURRENT ACCOUNT ಅನ್ನು ಹತ್ತಿರದ SBI ಬ್ಯಾಂಕಿನಲ್ಲಿಯೇ ತೆರೆದು ಬ್ಯಾಂಕ್ ಖಾತೆ ವಿವರಗಳನ್ನು ಇಲಾಖೆಯ ರಾ.ಸೇಯೋ ಕೋಶಕ್ಕೆ ಗೂಗಲ್ ಫಾರ್ಮ್ಂ ಅನ್ನು ಭರ್ತಿಮಾಡಿ (https://forms.gle/vcFGxJMzyoG9GvGt9) ದಿನಾಂಕ: 05.01.2023ರೊಳಗಾಗಿ ಕಡ್ಡಾಯವಾಗಿ ಸಲ್ಲಿಸಲು ಪ್ರಾಂಶುಪಾಲರುಗಳಿಗೆ ಸೂಚಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಲ್ಲೇಖಿತ ಪತ್ರವನ್ನು ಲಗತ್ತಿಸಿದೆ.

ನಿರ್ದೇಶಕರು 03/01/2023

ಇವರಿಗೆ,

1. ಇಲಾಖೆಯ ಎನ್.ಎಸ್.ಎಸ್ ಕೋಶದಿಂದ ಅನುದಾನ ಪಡೆಯುವ ಸಂಸ್ಥೆಗಳ ಪ್ರಾಂಶುಪಾಲರುಗಳಿಗೆ – ತುರ್ತು ಕ್ರಮಕ್ಕಾಗಿ,
2. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು
3. ಇ-ಆಡಳಿತ-ಇಲಾಖಾ ಅಂತರ್ಜಾಲದಲ್ಲಿ ಪ್ರಕಟಿಸಲು
4. ಕಛೇರಿ ಪ್ರತಿ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸಂಖ್ಯೆ: ಯುಸೇಇ/ರಾಸೇಯೋ/121/2022-23/547

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 03.01.2023

ಇವರಿಗೆ,

ಕಾರ್ಯಕ್ರಮ ಸಂಯೋಜನಾಧಿಕಾರಿಗಳು,
ರಾಷ್ಟ್ರೀಯ ಸೇವಾ ಯೋಜನೆಯ ಅನುಷ್ಠಾನದಲ್ಲಿರುವ,
ಎಲ್ಲಾ ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳು

ಮಾನ್ಯರೇ,

ವಿಷಯ: Implementation of Central Nodal Account (CNA) system for ZBSA ಬ್ಯಾಂಕ್ ಖಾತೆಯನ್ನು ಸೃಜಿಸುವ ಕುರಿತು.
ಉಲ್ಲೇಖ: 1. ದಿನಾಂಕ:30.12.2022ರಂದು ಕಳುಹಿಸಿರುವ ಇ-ಮೇಲ್ ನಂತೆ.
2. ಕೇಂದ್ರ ಸರ್ಕಾರದ ಇ-ಮೇಲ್ ದಿನಾಂಕ:31.12.2022

***

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1)ರ ಇ-ಮೇಲ್ ಮುಖಾಂತರ CNA Mapping ಮಾಡಲು ತಿಳಿಸಿರುತ್ತದೆ. ಸದರಿ ಉಲ್ಲೇಖ(1)ರ ಇ-ಮೇಲ್ ನ ಬಗ್ಗೆ ಯಾವುದೇ ಕ್ರಮ ಕೈಗೊಳ್ಳಬಾರದು. ಹಾಗೂ ಉಲ್ಲೇಖ (2) ರಂತೆ ZBSA (ZERO BALANCE SUBSIDIARY ACCOUNT - CURRENT ACCOUNT) ಚಾಲ್ತಿ (Current account) ಬ್ಯಾಂಕ್ ಖಾತೆಯನ್ನು ಸಮೀಪದ SBI ಬ್ಯಾಂಕ್ ನಲ್ಲಿ ಸೃಜಿಸಲು ತಿಳಿಸಿರುತ್ತಾರೆ.

ಆದ್ದರಿಂದ, ZBSA (ZERO BALANCE SUBSIDIARY ACCOUNT - CURRENT ACCOUNT) ಗೆ ಸಂಬಂಧಪಟ್ಟಂತೆ ತಮ್ಮ ವಿಶ್ವವಿದ್ಯಾಲಯ ಹಾಗೂ ಕಾಲೇಜುಗಳಲ್ಲಿ ಇದುವರೆಗೆ ಸೃಜಿಸಿರುವ ಬ್ಯಾಂಕ್ ಖಾತೆಗಳ ವಿವರಗಳನ್ನು ಹಾಗೂ ಕಾಲೇಜುಗಳು ZBSA ಖಾತೆಯನ್ನು ಸೃಜಿಸದ ಪಕ್ಷದಲ್ಲಿ ಶೀಘ್ರವಾಗಿ ಸೃಜಿಸಿ ಮಾಹಿತಿಯನ್ನು ಈ ಕಛೇರಿಯ goknsscell@gmail.com ಇ-ಮೇಲ್ ಗೆ ಕಳುಹಿಸಕೊಡುವಂತೆ ಕೋರಲಾಗಿದೆ.

<u>**ಸೂಚನೆ:**</u>

**ZBSA** (ZERO BALANCE SUBSIDIARY ACCOUNT - CURRENT ACCOUNT) ಖಾತೆಯನ್ನು ಶೀಘ್ರವಾಗಿ ಸೃಜಿಸಿ **PFMS ನಲ್ಲಿ CNA MAPPING** ಮಾಡಿ ಮಾಹಿತಿ ಸಲ್ಲಿಸಿದ ಮೇಲ **ಕೇಂದ್ರ ಸರ್ಕಾರದ ಅನುದಾನ** ಬಿಡುಗಡೆಯಾಗುತ್ತದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

**(ಪ್ರತಾಪ್ ಲಿಂಗಯ್ಯ)**
ರಾಜ್ಯ ಎನ್.ಎಸ್.ಎಸ್.ಅಧಿಕಾರಿ,
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಪ್ರತಿ:

1. ಪ್ರಾದೇಶಿಕ ನಿರ್ದೇಶಕರು, ಎನ್.ಎಸ್.ಎಸ್. ಪ್ರಾದೇಶಿಕ ಕಛೇರಿ, ಭಾರತ ಸರ್ಕಾರ.